ಪ್ರಧಾನ ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.416/2023 ,
ಚಾಸಾ-5, ಪ್ರಾಸಾ -5

| | |
|---|---|
| ಹೆಸರು | ದುರ್ಗಾ ದಾಸ್ ಶೆಟ್ಟಿ |
| ತಂದೆಯ ಹೆಸರು | ತಿಮ್ಮಪ್ಪ ಶೆಟ್ಟಿ |
| ವಯಸ್ಸು | 39 ವರ್ಷ |
| ಕೆಲಸ | ಕನ್‌ಸ್ಟ್ರಕ್ಷನ್ ಕೆಲಸ |
| ವಾಸ | ಮುಚ್ಚೂರೂರು ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 13-03-2026 |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

1. ಚಾಸಾ-6 ರವರ ಪರಿಚಯವಿರುತ್ತದೆ. ಚಾಸಾ-1 ರವರು ಗೊತ್ತಿರುತ್ತದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಹಿಯನ್ನು ನಾನು ಹೊಸಬೆಟ್ಟು ಗ್ರಾಮದ ಬಿರಾವು ಎಂಬಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಆ ಸಹಿಯನ್ನು ನಾನು ದಿಃ 07-10-2022 ರಲ್ಲಿ ಮಾಡಿರುತ್ತೇನೆ. ಮಹಜರಿಗಾಗಿ ನನ್ನನ್ನು ಮತ್ತು ಚಾಸಾ-6 ರವರನ್ನು ಪೊಲೀಸರು ಕರೆದಿದ್ದರು. ಆ ಸಮಯದಲ್ಲಿ ಚಾಸಾ-1 ರವರು ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಮಹಜರನ್ನು ಬೆಳಿಗ್ಗೆ 9-30 ರಿಂದ 10-30 ಗಂಟೆಯವರೆಗೆ ಜರುಗಿಸಲಾಗಿರುತ್ತದೆ. ಮಹಜರ್ ಸಮಯದಲ್ಲಿ ಒಂದು ಕತ್ತಿ, ಮರದ ದೊಣ್ಣೆ ಮತ್ತು ಒಂದು ಕಲ್ಲನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

ನಾನು ಮತ್ತು ಚಾಸಾ-6 ರವರು ಒಟ್ಟಿಗೆ ಕೆಲಸ ಮಾಡಲು ಸೈಟಿಗೆ ಹೋಗುತ್ತಿದ್ದುದ್ದರಿಂದ ಪರಿಚಯವಿತ್ತು. ಆ ಸಮಯದಲ್ಲಿ ಕಿಶೋರ್ ಆಳ್ವಾ ರವರ ಸಂಬಂಧಿಕರಾದ ಸುಜಯ್ ಆಳ್ವಾರವರ ಸೈಟಿನಲ್ಲಿ ನಾನು ಮತ್ತು ಚಾಸಾ-6 ರವರು ಕೆಲಸ ಮಾಡುತ್ತಿದ್ದೆವು. ಆರೋಪಿತರಿಗೂ ಮತ್ತು ಸುಜಯ್ ಆಳ್ವಾರವರ ನಡುವೆ ಜಮೀನ ಬಗ್ಗೆ ತಕರಾರು ಇರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾವು ಸುಜಯ್ ಆಳ್ವಾ ರವರ ಸೈಟಿಗೆ ಹೋಗುತ್ತಿರುವ ಸಮಯದಲ್ಲಿ ಪೊಲೀಸರು ಮಹಜರ್ ಮಾಡುವುದು ಇದೆ ಬನ್ನಿ ಎಂದು ಕರೆದಿರುತ್ತಾರೆ. ಪೊಲೀಸರು ನಮ್ಮನ್ನು ಕರೆದಾಗ ಬೆಳಿಗ್ಗೆ 9-30 ಗಂಟೆಯಾಗಿತ್ತು. ಪೊಲೀಸರು ಕರೆ ಸ್ಥಳದಿಂದ ನಮ್ಮ ಮನೆ 20 ಕಿಮಿ ದುರಾದಲ್ಲಿ ಇದೆ. ಅದೇ ರೀತಿ ಚಾಸಾ-6 ರವರ ಮನೆ ಸಹ ನಮ್ಮನ್ನು ಕರೆದ ಸ್ಥಳದಿಂದ ಅವರ ಮನೆ 20 ಕಿಮಿ ದುರಾದಲ್ಲಿ ಇದೆ. ಪೊಲೀಸರು ಸ್ವತ್ತುಗಳನ್ನು ಸ್ವಾ ಧೀನ ಪಡಿಸಿಕೊಂಡಾಗ ಗುರುತಿನ ಚೀಟಿಗಳನ್ನು ಅಂಟಿಸಿರುತ್ತಾರೆ. ಆ ಗುರುತಿನ ಚೀಟಿಗೆ ಪಂಚರ ಸಹಿಯನ್ನು ಪಡೆದುಕೊಂಡಿದ್ದಾರೋ ಇಲ್ಲವೋ ನೆನಪವು ಇರುವುದಿಲ್ಲ. ನನಗೆ ಕಿಶೋರ್ ಆಳ್ವಾರವರ ಪರಿಚಯವಿದೆ. ನಾನು ಮತ್ತು ಚಾಸಾ-6 ರವರು ಕಿಶೋರ್ ಆಳ್ವಾರವರಿಗೆ ಬಹಳ ಆತ್ಮೀಯರು ಎಂದರೆ ಸರಿಯಲ್ಲ. ಕಿಶೋರ್ ಆಳ್ವಾರವರೇ ಕಂದಾಯ ಅಧಿಕಾರಿಗಳ ಮೂಲಕ ಮಾಡಿದ ಸುಳ್ಳು ಪ್ರಕರಣಕ್ಕೆ ನಮ್ಮನ್ನು ಸುಳ್ಳು ಸಾಕ್ಷಿದಾರರನ್ನಾಗಿ ಕಿಶೋರ್ ಆಳ್ವಾರವರೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿರುವುದಿಲ್ಲ. ಪೊಲೀಸರು ಯಾವುದೇ ಮಹಜರನ್ನು ಕೈಗೊಂಡಿರುವುದಿಲ್ಲ ಮತ್ತು ನಾವು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾವು ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ನ್ನು ಸ್ಥಳದಿಂದ ಸ್ವಾ ಧೀನ ಪಡಿಸಿಕೊಂಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-
ವ್ಯ ನ್ಯಾ.ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ(C/C)